(ಈ) ಹಾಗಿದ್ದಲ್ಲಿ ಅದಕ್ಕಾಗಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ ?

(ಉ) ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಣ ಬಿಡುಗಡೆಯಾಗದಿರುವುದರಿಂದ ಹಾಲನ್ನು ನೀಡುವ ರೈತರುಗಳಿಗೆ ಹಣ ಪಾವತಿ ಮಾಡದೇ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

(ಊ) ಸರ್ಕಾರ ಆ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಸಂಬಂಧಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಬಾಕಿ ಇರುವ ಹಣವನ್ನು ಕೂಡಲೇ ಬಿಡುಗಡೆ ಮಾಡುವುದೇ?

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು).—

(ಅ) ಸರ್ಕಾರಿ ಪ್ರಾಥಮಿಕ ಶಾಲೆಯ ೧ನೇ ತರಗತಿಯ ಮಕ್ಕಳಿಗೆ ಮಾತ್ರ ಹಾಲು ಸರಬರಾಜು ಮಾಡಲಾಗುತ್ತಿದೆ.

(ಆ) ನಿಜ.

(ಇ) ದಿನಾಂಕ ೧೫ನೇ ಮಾರ್ಚ್ ೧೯೯೪ ರ ಅಂತ್ಯಕ್ಕೆ ರೂ. ೧೨.೫೫ ಕೋಟಿ ಹಣ ಬಾಕಿ ಇದ್ದು ಇದುವರೆವಿಗೆ ರೂ. ೪.೦೦ ಕೋಟಿ ಹಣವನ್ನು ಕರ್ನಾಟಕ ಹಾಲು ಮಹಾ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

(ಈ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

(ಉ) ಹೌದು.

(ಊ) ಬಾಕಿ ಹಣ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ನಾಗರ ಹೊಳೆ ಅರಣ್ಯದಲ್ಲಿ ಬೆಂಕಿ ಬಿದ್ದ ಬಗ್ಗೆ

೪೭೯(೭೫೩) ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ನಾಗರಹೊಳೆ ಅರಣ್ಯಕ್ಕೆ ಎಷ್ಟು ಸಾರಿ ಬೆಂಕಿ ಬಿದ್ದಿದೆ?

(ಆ) ಎಷ್ಟು ಪ್ರಕರಣದಲ್ಲಿ ಆಕಸ್ಮಿಕ ಹಾಗೂ ಎಷ್ಟು ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ನಡೆದಿದೆ?

(ಇ) ಆ ಪ್ರಕರಣಗಳ ವಿಚಾರಣೆ ಯಾವ ಹಂತ ಮುಟ್ಟಿದೆ?

(ಈ) ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು?

(ಉ) ನಾನಾಜಿ ಮತ್ತು ಪಡ್ಡಿ ಎಂಬ ಹಾಡಿಗೆ ಯಾವಾಗ ಭೇಟಿ ನೀಡಲಾಗಿದೆ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

(ಅ) ಎರಡು ಸಲ.

(ಆ) ೧೯೯೨ನೇ ಸಾಲಿನ ಒಂದು ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಲಾಗಿದೆ. ೧೯೯೪ನೇ ಸಾಲಿನಲ್ಲಿ ಕಾಡಿನ ಬೆಂಕಿ ಪ್ರಕರಣವು ವರದಿಯಾಗಿದ್ದು ಅದಕ್ಕೆ ಕಾರಣವನ್ನು ಇನ್ನೂ ಪತ್ತೆ ಹಚ್ಚಿರುವುದಿಲ್ಲ.

(ಇ) ೧೯೯೨ ರ ಬೆಂಕಿಯ ಪ್ರಕರಣದಲ್ಲಿ ತನಿಖೆ ನಡೆಸಿದ ಸಿ.ಒ.ಡಿ, ವಿಭಾಗದವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ೧೯೯೪ ರ ಬೆಂಕಿ ಪ್ರಕರಣದ ಬಗ್ಗೆ ಸರ್ಕಾರ ಯಾವ ತನಿಖೆಗೂ ಆದೇಶ ಮಾಡಿರುವುದಿಲ್ಲ.

(ಈ) ೧೯೯೨ ರ ಪ್ರಕರಣ ... ರೂ. ೨೩.೦೦ ಲಕ್ಷ
೧೯೯೪ ರ ಪ್ರಕರಣ ... ನಷ್ಟವನ್ನು ಅಂದಾಜು ಮಾಡಿರುವುದಿಲ್ಲ.

(ಉ) ನಾನಾಜಿ ಹಾಡಿಯು ಅರಣ್ಯ ರಸ್ತೆಯ ಪಕ್ಕದಲ್ಲಿದ್ದು ಪ್ರತಿ ಸಲವೂ ಅರಣ್ಯ ಸಿಬ್ಬಂದಿಯು ರು ಅರಣ್ಯ ಗಸ್ತು ಮಾಡುವ ವೇಳೆಯಲ್ಲಿಯೂ ಸದರಿ ಹಾಡಿಯ ಮುಂದೆಯೇ ಹಾದುಹೋಗಬೇಕಾಗಿರುತ್ತೆ ಹೆಡ್ಡಿ ಎಂಬ ಹೆಸರಿನ ಹಾಡಿ ಯಾವುದೂ ಇರುವುದಿಲ್ಲ.

ಗ್ರಂಥಾಲಯ ಸಹಾಯಕರ ಹುದ್ದೆ ಭರ್ತಿ

೪೮೩.(೮೨೯) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ವಸ್ತು ಲೇಖನ ಸಾಮಗ್ರಿಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಗ್ರಂಥಗಳ ಸಂಗ್ರಹಣೆ ಆಧರಿಸಿ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರಿ ಆಜ್ಞೆ ಇರುವುದೆ?

(ಆ) ಹಾಗಾದರೆ ಎಷ್ಟು ಜನರಿಗೆ ಮುಂಬಡ್ತಿ ಕೊಡಲಾಗಿದೆ?

(ಇ) ಮಂಡಲ ಗ್ರಂಥಾಲಯ ಮೇಲ್ವಿಚಾರಕರನ್ನು ಖಾಯಂ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

(ಈ) ಸಾರ್ವಜನಿಕ ಗ್ರಂಥಾಲಯ ಕಾಯಿದೆ ಪ್ರಕಾರ ೧ ಲಕ್ಷ ಜನ ಸಂಖ್ಯೆ ಹೊಂದಿದ ನಗರಗಳಿಗೆ ನಗರ ಗ್ರಂಥಾಲಯ ಸ್ಥಾಪಿಸುವ ಅವಕಾಶ ಸರಕಾರದ ಮುಂದಿದೆಯೇ?

(ಉ) ಎಷ್ಟು ನಗರಗಳು ೧ ಲಕ್ಷ ಜನ ಸಂಖ್ಯೆ ಮೀರಿವೆ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

(ಅ) ಇದೆ.

(ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

(ಇ) ಮಂಡಲ ಗ್ರಂಥಾಲಯ ಮೇಲ್ವಿಚಾರಕರನ್ನು ಗೌರವ ಸಂಭಾವನೆಯ ಆಧಾರದ ಮೇಲೆ ನೇಮಕಾತಿ ಮಾಡಿರುವುದರಿಂದ ಖಾಯಂ ಮಾಡಲು ಬರುವುದಿಲ್ಲ.

(ಈ) ಹೌದು. ಈಗಾಗಲೇ ೧೦ ನಗರಗಳಿಗೆ ಈ ಸೌಲಭ್ಯ ನೀಡಲಾಗಿದೆ. ನಾಲ್ಕು ನಗರಗಳಿಗೆ ನಗರ ಗ್ರಂಥಾಲಯ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಉ) ೧೮ ನಗರಗಳು.

ಚನ್ನಪಟ್ಟಣ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಕೋರ್ಸ್ ಪ್ರಾರಂಭ

೪೮೪ (೮೩೩) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ).—ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಚನ್ನಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಬಾಕಿ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಈ ಕೋರ್ಸುಗಳನ್ನು ಒಳಗೊಂಡಂತೆ ಚನ್ನಪಟ್ಟಣದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ೧೯೯೪-೯೫ನೇ ಸಾಲಿನಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದಲ್ಲಿದೆಯೆ?